ಖರ್ಚಿಗೆ ಇಬ್ಬರದೂ ಸಮಪಾಲು. ಕೆಲವು ಬಾರಿ ಯಾರು ಎಷ್ಟು ಹಣ ಕೊಡಬೇಕು ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತಿತ್ತು. ಆಗ ತಂದೆ ತಾಯಿಯ ನಡುವೆ ಕದನವೇ ಏರ್ಪಡುತ್ತಿತ್ತು. ಮನೆಗಾಗಿ ಎಂದು ಕೊಂಡ ಕಾಫಿ ಪರ್ಕೊಲೇಟರ್ ನಿಮಿತ್ತ ಹೊಡೆದಾಟವೇ ಆಗಿಹೋಗಿತ್ತು. "ಅದನ್ನು ಮನೆಗಾಗಿ ಕೊಂಡೆ" ಎಂದಿದ್ದ ತಾಯಿ. "ಅದು ಬೇಕಾಗಿರಲಿಲ್ಲ. ನಾನು ಸದಾ ಇನ್‌ಸ್ಟಂಟ್ ಕಾಫಿ ಕುಡಿಯುತ್ತೇನೆ. ನಿನಗೆ ಗೊತ್ತಿರುವ ವಿಷಯ ಇದು. ನಿನಗೋಸ್ಕರ ಕೊಂಡಿದ್ದೀಯ. ನೀನೇ ಅದರ ಖರ್ಚನ್ನು ವಹಿಸ ಬೇಕು." ಮರುನುಡಿದಿದ್ದ ತಂದೆ.

ಪ್ರತಿ ಶನಿವಾರ ನವ ದಂಪತಿ ತಾರಳ ತಾಯಿಮನೆಗೆ ಬರುವ ಪರಿಪಾಠವಾಯಿತು. ಅಳಿಯ ಇಡ್ಲಿ, ದೋಸೆ ಚಟ್ನಿಗಳಿಗೆ ಹೊಂದಿಕೊಳ್ಳುವುದಿರಲಿ, ಅವು ಅವನ ಪ್ರಿಯ ತಿಂಡಿಗಳಾದವು. ಶನಿವಾರ ರಾತ್ರಿಯ ಊಟವನ್ನು ಸ್ಯಾಮ್ ಎದುರು ನೋಡುತ್ತಿದ್ದ. ಹೆಚ್ಚು ಮಾತನಾಡದ ಭಟ್ ಅವರು ಮುಗುಳ್ನಗುತ್ತಾ ಅಳಿಯನನ್ನು ಕೊಂಡಾಡುತ್ತಿದ್ದರು. "ಇದ್ದರೆ ಇಂತಹ ಅಳಿಯ ಇರಬೇಕು" ಎಂದು ಅವರಿಗೆ ಅನ್ನಿಸಿದ್ದರೆ ಅತಿಶಯವೇನೂ ಅಲ್ಲ. "ಇವರ ಕುಟುಂಬಕ್ಕೆ ನಾನು ಇನ್ನೊಬ್ಬ ಮಗನಾದೆ" ಎಂದು ಸ್ಯಾಮನಿಗೂ ಅನ್ನಿಸಿದ್ದುಂಟು.

ನಿನ್ನೆ ಆಗಿದ್ದನ್ನು ಸುಲಭವಾಗಿ ಹೇಳಬಹುದು. ಆದರೆ, ನಾಳೆ ಆಗುವುದನ್ನು ಹೇಳುವುದು ಸಾಧ್ಯವೇ? ಮಗಳ ಮದುವೆಯಾಗಿ ಒಂದು ವರ್ಷ ಕಳೆಯುತ್ತಿದ್ದಂತೆ ಸಿಡಿಲು ಬಡಿದಂತೆ ಬಂದ ಸುದ್ದಿ ಭಟ್ ಅವರ ಕುಟುಂಬಕ್ಕೆ ಹೊಡೆಯಿತು. ಶೀಲಾ ಅವರಿಗೆ ಕ್ಯಾನ್ಸರ್! ಒಂದೆರಡು ವರ್ಷಗಳಿಂದ ಯಾವುದೋ ಕಾರಣಗಳಿಗೆ ಅವರು ವೈದ್ಯರನ್ನು ನೋಡಿದ್ದರು. ಪರೀಕ್ಷೆಗಳನ್ನು ಮಾಡಿಸಿಕೊಂಡಿದ್ದರು. ವೈದ್ಯರ ಎಲ್ಲಾ ತಪಸೀಲುಗಳನ್ನು, ಯಂತ್ರ ಸಲಕರಣೆಗಳನ್ನು ವಂಚಿಸಿದ್ದ ಅನ್ನನಾಳದ ಕ್ಯಾನ್ಸರ್ ಈಗ ತಲೆದೋರಿತು. "ಇದಾಗಲೇ ಮೂರನೇ ಹಂತವನ್ನು ಮೀರಿ ನಾಲ್ಕನೇ ಹಂತಕ್ಕೆ ಕಾಲಿಟ್ಟಿದೆ. ಶೀಲಾ ಅವರು ಇನ್ನು ಮೂರು ತಿಂಗಳು ಬದುಕಬಹುದು, ಮೂರು ವರ್ಷ ಬದುಕಬಹುದು. ಎಲ್ಲಾ ಅವರ ನಸೀಬು. ನಾವು ಹೇಳುವುದು ಕಷ್ಟ. ಸಾಧ್ಯವಾದ ಒಂದೆರಡು ಚಿಕಿತ್ಸೆಗಳನ್ನು ಮಾಡುತ್ತೇವೆ. ಆದರೆ, ಯಾವುದೇ ಗ್ಯಾರಂಟಿ ಕೊಡುವುದು ಸಾಧ್ಯವಿಲ್ಲ." ಎಂದು ಹೇಳಿಬಿಟ್ಟರು ವೈದ್ಯರು.

ಸಿಡ್ನಿಯ ಹೆಸರಾಂತ ಆಸ್ಪತ್ರೆಯಲ್ಲಿಯೇ ಶೀಲಾ ಅವರಿಗೆ ಚಿಕಿತ್ಸೆ ನೀಡಲಾಯಿತು. ವಿಶ್ವಕ್ಕೇ ನಿಸ್ಸೀಮರು ಎಂದೆನಿಸಿದ್ದ ಜಾನ್ ಮಿಲ್ಲರ್ ಅವರೇ ಚಿಕಿತ್ಸೆಯ ಹೊಣೆಹೊತ್ತರು. ಕೆಲವು ದಿನಗಳ ನಂತರ ಶೀಲಾ ಮನೆಗೆ ಹಿಂದಿರುಗಿದರು. ಮತ್ತೆ ಒಂದು ತಿಂಗಳಿಗೆ ಆಸ್ಪತ್ರೆಗೆ ಬರುವಂತಾಯಿತು. ಅವರ ಮಗ ಸೊಸೆ ಅಮೆರಿಕದಿಂದ ಬಂದವರು ಕೆಲಕಾಲ ತಾಯಿಯನ್ನು ನೋಡಿಕೊಂಡು ಮರಳಿದರು.

ಶೀಲಾ ಅವರ ಅಂಗಾಂಗಗಳು ಸೋಲಲಾರಂಭಿಸಿದವು. ಸಾವು ಸಮೀಪವಾಯಿತು. ಕುಟುಂಬದ ಸದಸ್ಯರೆಲ್ಲಾ ಅವರ ಬಳಿಯೇ ಇರುತ್ತಿದ್ದರು. ಒಬ್ಬೊಬ್ಬರನ್ನೂ ಆಕೆ ಮಾತನಾಡಿಸಿದರು. "ಸ್ಯಾಮ್" ಎಂದು ಅಳಿಯನನ್ನು ಹತ್ತಿರಕ್ಕೆ ಕರೆದರು. "ನೋಡು, ನೀನು ತಾರಾಳನ್ನು ನೋಡಿಕೊಳ್ಳುತ್ತೀಯ, ಅದರಲ್ಲಿ ಸಂಶಯವಿಲ್ಲ. ಆದರೆ, ನೀನು ನನ್ನ ಮಗನ ಹಾಗೆಯೇ. ಇನ್ನೇನು ನಾನು ಹೊರಟೆ. ನನ್ನ ನಂತರ ನನ್ನ ಗಂಡ ಏನನ್ನೂ ಮಾಡಲಾರರು. ಅವರು ಪೂರ್ತಿಯಾಗಿ ನನ್ನನ್ನು ಅವಲಂಬಿಸಿದ್ದಾರೆ. ನನ್ನ ಮಗ ಅಮೆರಿಕದಲ್ಲಿ, ಅವನಿಗೆ ಅವನದೇ ಸಂಸಾರ. ಅವನು ನಮ್ಮ ಬಗ್ಗೆ ನಿಗಾ ವಹಿಸುವುದಿಲ್ಲ. ನೀನು ದಯವಿಟ್ಟು ಅವರನ್ನು ಮತ್ತು ಮನೆಯನ್ನು ನೋಡಿಕೊಳ್ಳಬೇಕು. ಇನ್ನೊಂದು ಮಾತು. ಆಗಾಗ ಹೋಗಿ ನಿಮ್ಮ ತಾಯಿಯನ್ನು ನೋಡಿಕೊಂಡು ಬಾ. ತಾರಾಳನ್ನೂ ಜೊತೆಗೆ ಕರೆದುಕೊಂಡು ಹೋಗು. ತಾಯಿಯಂತಹ ವಸ್ತು ಮತ್ತೆ ಸಿಗುವುದಿಲ್ಲ. ಮಾತು ಕೊಡುತ್ತೀಯಾ?" ಎಂದು ಅಳಿಯನ ಕೈಹಿಡಿದು ಕೇಳಿಕೊಂಡರು. ಸ್ಯಾಮ್, "ಆಗಲಿ ಶೀಲಾ" ಎನ್ನಲು ಹೋಗಿ, "ಆಗಲಿ ಮಮ್" ಎಂದ. ಕೇಳಿಸಿಕೊಂಡ ಎಲ್ಲರ ಕಣ್ಣಲ್ಲೂ ನೀರು.

"ಮದುವೆ ಅಂದರೆ ಪ್ರಾಯಶಃ ಇದು. ನಾನು ಈ ಕುಟುಂಬದಲ್ಲಿ ಒಬ್ಬನಾದೆ. ನಾನು ಶೋಧಿಸುತ್ತಿದ್ದ ಮದುವೆಯ ಅರ್ಥ ಮತ್ತು ಗುರಿಗಳು ಇಲ್ಲೆಲ್ಲೋ ಅಡಗಿವೆ." ಎನಿಸಿತು ಸ್ಯಾಮನಿಗೆ.

ಮೂರುದಿನಗಳಲ್ಲಿ ಶೀಲಾ ಕೊನೆಯುಸಿರೆಳೆದರು. ಕೂಡಲೇ ಸ್ಯಾಮ್ ಏಜೆಂಟರುಗಳಿಗೆ ಫೋನ್ ಮಾಡಿ